(ಸದನವು ಬೆಳಿಗ್ಗೆ 11 ಗಂಟೆ 25 ನಿಮಿಷಗಳಿಗೆ ಸಮಾವೇಶಗೊಂಡಿತು)

ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು.

1. ಸಂತಾಪ ಸೂಚನೆ

ಅಧ್ಯಕ್ಷರು:– ವಿಧಾನಸಭೆಯ ಮಾಜಿ ಸದಸ್ಯರುಗಳಾದ ಎಂ.ಪಿ. ವೆಂಕಟೇಶ್, ಸಿ.ಆರ್. ಮೊಹಮದ್ ಸೈಫುದ್ದೀನ್, ನಿವೃತ್ತ ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್ ಹಾಗೂ ಪತ್ರಿಕಾ ವರದಿಗಾರರಾದ ಎನ್.ಡಿ. ಶಿವಕುಮಾರ್ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಎಂ.ಪಿ. ವೆಂಕಟೇಶ್

ಎಂ.ಪಿ. ವೆಂಕಟೇಶ್ ಅವರು 18 ನೇ ಮಾರ್ಚ್, 1953 ರಂದು ಮೈಸೂರಿನಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರು ಹಾಗೂ ಸಮಾಜ ಸೇವಕರಾಗಿದ್ದರು.

1989 ರಲ್ಲಿ 9ನೇ ವಿಧಾನಸಭೆ ಹಾಗೂ 2004 ರಲ್ಲಿ 12ನೇ ವಿಧಾನಸಭೆಗೆ ಹೆಗ್ಗದೇವನಕೋಟೆಯ ಮೀಸಲು ಕ್ಷೇತ್ರದಿಂದ ಸದಸ್ಯರಾಗಿ ಆಯ್ಕೆಯಾಗಿದ್ದರು. ಎಂ.ಪಿ. ವೆಂಕಟೇಶ್ ಅವರು ದಿನಾಂಕ 12.12.2014 ರಂದು ನಿಧನ ಹೊಂದಿರುತ್ತಾರೆ.

2. ಸಿ.ಆರ್. ಮೊಹಮ್ಮದ್ ಸೈಫುದ್ದೀನ್

ಸಿ.ಆರ್. ಮೊಹಮ್ಮದ್ ಸೈಫುದ್ದೀನ್ ಅವರು ಚಿತ್ರದುರ್ಗದಲ್ಲಿ ಜನಿಸಿದ್ದು, ಬಿ.ಎ. ಬಿ.ಎಲ್, ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರು ಹಾಗೂ ಸಮಾಜ ಸೇವಕರಾಗಿದ್ದರು. 1972ರಲ್ಲಿ ಐದನೇ ವಿಧಾನಸಭೆಗೆ ಚಿತ್ರದುರ್ಗ ಕ್ಷೇತ್ರದಿಂದ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದ ದಿವಂಗತರು ದೇವರಾಜ ಅರಸು ಅವರೊಂದಿಗೆ ಹೆಚ್ಚು ಒಡನಾಟವನ್ನು ಹೊಂದಿದ್ದರು ಹಾಗೂ ಮುಖ್ಯ ಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆ ಅವರ ಅವಧಿಯಲ್ಲಿ ವಕ್ಫ್ ಬೋರ್ಡ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಸಿ.ಆರ್. ಮೊಹಮದ್ ಸೈಫುದ್ದೀನ್ ಅವರು ದಿನಾಂಕ 14.12.2014 ರಂದು ನಿಧನ ಹೊಂದಿರುತ್ತಾರೆ.

3. ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್

ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್ ಅವರು 15ನೇ ನವೆಂಬರ್ 1915 ರಂದು ಕೇರಳದ ಪಾಲಕಾಡ್‌ನಲ್ಲಿ ಜನಿಸಿದ್ದು, ಅವರು ಮೊದಲು ಕಮ್ಯೂನಿಷ್ಟ್ ಸರ್ಕಾರದಲ್ಲಿ ಕಾನೂನು ಸಚಿವರಾಗಿದ್ದು, ಭೂ ಸುಧಾರಣೆ ಕಾಯ್ದೆ ಜಾರಿಗೆ ತಂದು ಗೇಣಿದಾರರಿಗೆ ಅನುಕೂಲ ಮಾಡಿಕೊಟ್ಟಿದ್ದರು. 70 ರ ದಶಕದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳಾಗಿ 7 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ದಿವಂಗತರು 1999 ರಲ್ಲಿ ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿದ್ದರು.

ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್ ಅವರು ದಿನಾಂಕ 4.12.2014 ರಂದು ನಿಧನ ಹೊಂದಿರುತ್ತಾರೆ.

4. ಎನ್.ಡಿ. ಶಿವಕುಮಾರ್

ಎನ್.ಡಿ. ಶಿವಕುಮಾರ್, ವರದಿಗಾರರು, ಟೈಮ್ಸ್ ಅಫ್ ಇಂಡಿಯಾ ಪತ್ರಿಕೆ, ಅವರು ತುಮಕೂರು ಜಿಲ್ಲೆ ನಂದಿಹಳ್ಳಿ ಗ್ರಾಮದವರಾಗಿದ್ದು, ಬೆಳಗಾವಿ ಅಧಿವೇಶನದ ಕಾರ್ಯಕಲಾಪಗಳ ವರದಿ ಮಾಡಲು ಆಗಮಿಸಿದ್ದ ವೇಳೆಯಲ್ಲಿ ಹಠಾತ್ ಹೃದಯಾಘಾತಕ್ಕೆ ಒಳಗಾಗಿರುತ್ತಾರೆ.

ಎನ್.ಡಿ. ಶಿವಕುಮಾರ್ ಅವರು ದಿನಾಂಕ 15.12.2014 ರಂದು ನಿಧನ ಹೊಂದಿರುತ್ತಾರೆ. ಮೃತರ ಗೌರವಾರ್ಥ ಚರ್ಚೆಯಲ್ಲಿ ಭಾಗವಹಿಸುವುದು.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಶ್ರೀ ಎಂ.ಪಿ. ವೆಂಕಟೇಶ್ ಅವರು ಹೆಗ್ಗಡದೇವನ ಕೋಟೆ ವಿಧಾನಸಭಾ ಕ್ಷೇತ್ರದಿಂದ 1989 ಮತ್ತು 2004 ರಲ್ಲಿ ಎರಡು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಇವರು ಕೃಷಿಕ ಸಮಾಜದಿಂದ ಬಂದಂತಹವರು. ಅವರ

ತಂದೆಯವರಾದ ಶ್ರೀ ಈರಣ್ಣನವರೂ ಸಹ ಮೂರು ಬಾರಿ ಹೆಗ್ಗಡದೇವನ ಕೋಟೆಯ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿದ್ದರು. ವೆಂಕಟೇಶ್ ಅವರೂ ಸಹ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿದ್ದವರು ಮತ್ತು ಬಹಳ ಸ್ನೇಹಜೀವಿಯಾಗಿದ್ದರು. ಅವರು ಜನಪರವಾದಂಥ ಕಾಳಜಿಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದರು. ಆದರೆ, ಬಹಳ ದೀರ್ಘಕಾಲ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರು ಇವತ್ತು ನಮ್ಮನೆಲ್ಲರನ್ನು ಅಗಲಿದ್ದಾರೆ. ಬೆಳಗಾವಿಯಲ್ಲಿ ವಿಧಾನಸಭೆ ಪ್ರಾರಂಭವಾದ ಮೇಲೆ ಇವರೆಲ್ಲರೂ ನಿಧನರಾಗಿರುವಂಥವರಾಗಿದ್ದಾರೆ. ಎಂ.ಪಿ. ವೆಂಕಟೇಶ್ ರವರು ಇನ್ನೂ ಹೆಚ್ಚು ಕಾಲ ನಮ್ಮೊಂದಿಗೆ ಇರಬೇಕಾಗಿತ್ತು. ಆದರೆ ಹಠಾತ್ ಸಾವಿಗೆ ತುತ್ತಾಗಿ ಮರಣ ಹೊಂದಿದ್ದಾರೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ನಾನು ಪ್ರಾರ್ಥನೆಯನ್ನು ಮಾಡುತ್ತೇನೆ. ಸಿ.ಆರ್. ಮೊಹಮದ್ ಸೈಫುದ್ದೀನ್ ರವರು ಚಿತ್ರದುರ್ಗ ಜಿಲ್ಲೆಯವರು. ಅವರು ವಕೀಲರಾಗಿದ್ದರು. 1977 ರಲ್ಲಿ ವಿಧಾನಸಭೆಗೆ ಒಂದು ಬಾರಿ ಆಯ್ಕೆಯಾಗಿದ್ದರು. ಹಾಗೆ, ಅವರು ವಕ್ಫ್ ಬೋರ್ಡ್ ಅಧ್ಯಕ್ಷರಾಗಿಯೂ ಕೂಡ ಕೆಲಸ ಮಾಡಿದ್ದರು. ಅವರು ವಕೀಲರಾಗಿ, ಶಾಸಕರಾಗಿ, ವಕ್ಫ್ ಬೋರ್ಡ್ ಅಧ್ಯಕ್ಷರಾಗಿ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡಿ, ಜನರ ಪ್ರೀತಿ–ಪಾತ್ರಕ್ಕೆ ಪಾತ್ರರಾಗಿದ್ದರು. ಅವರು ಕೂಡ ಇತ್ತೀಚೆಗೆ ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್ ರವರು ಕೇರಳ ರಾಜ್ಯದವರಾಗಿದ್ದರು. ಇವರು ಮೊದಲನೇ ಕಮ್ಯೂನಿಸ್ಟ್ ಸರ್ಕಾರ ಕೇರಳದಲ್ಲಿ ರಚನೆಯಾದಾಗ ಆ ಸರ್ಕಾರದಲ್ಲಿ ಕಾನೂನು ಸಚಿವರಾಗಿ ಕೆಲಸ ಮಾಡಿದ್ದರು. ಅವರು ರಾಜಕಾರಣದಲ್ಲಿದ್ದರು. ಅವರು ಸಚಿವರಾಗಿ ಕೆಲಸ ಮಾಡಿ, ನಂತರ ಸುಪ್ರೀಂಕೋರ್ಟ್‌ಗೆ ನ್ಯಾಯಾಧೀಶರಾಗಿ ನೇಮಕ ಆಗಿದ್ದರು. ಸುಪ್ರೀಂಕೋರ್ಟ್ ನ್ಯಾಯಾಧೀಶರಾಗಿ ಬಹಳ ಉತ್ತಮವಾದಂಥ ತೀರ್ಪುಗಳನ್ನು ಅವರು ಕೊಟ್ಟಿದ್ದಾರೆ. ಅವರ ತೀರ್ಪುಗಳು ಮತ್ತು ಭಾಷೆಯಲ್ಲಿ ಒಂದು ರೀತಿಯ flowery language ಇರುತ್ತಿತ್ತು. ಅವರು ತೀರ್ಪುಗಳು ಬಹಳ ಸುಂದರವಾದಂಥ ಭಾಷೆಯಲ್ಲಿ ಇರುತ್ತಿತ್ತು. ಅಂಥ

ಒಂದು ತೀರ್ಪುಗಳನ್ನು ಅವರು ಕೊಡುತ್ತಿದ್ದರು. ಸುಮಾರು 7 ವರ್ಷಗಳ ಕಾಲ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳಾಗಿ ಕೆಲಸ ಮಾಡಿದ್ದರು. ಪದ್ಮವಿಭೂಷಣ ಪ್ರಶಸ್ತಿ ಕೂಡ ಅವರಿಗೆ ದೊರಕಿತ್ತು. ಅವರು ಬಹಳ ಮೇಧಾವಿ ನ್ಯಾಯಾಧೀಶರಾಗಿದ್ದರು. ಅಂತಹ ಒಬ್ಬ ವ್ಯಕ್ತಿ ಇವತ್ತು ನಮ್ಮನ್ನು ಅಗಲಿದ್ದಾರೆ. ಅವರು ಬಹಳ ದೀರ್ಘಕಾಲ ಬಾಳಿದ್ದಾರೆ. ಇತ್ತೀಚೆಗೆ ಅವರಿಗೆ 100 ವರ್ಷಗಳು ತುಂಬಿದ ಪ್ರಯುಕ್ತ ನಡೆದ ಸಮಾರಂಭವನ್ನು ನಾನು ನೋಡಿದ್ದೆ. ಅವರು 100 ವರ್ಷಗಳ ಕಾಲ ಪೂರೈಸಿದ್ದಾರೆಂದು ಇತ್ತೀಚೆಗೆ ಅವರಿಗೆ 100 ವರ್ಷಗಳ ಆಚರಣೆಯನ್ನು ಮಾಡಿದ್ದರು. ಅವರು 100 ವರ್ಷಗಳ ಕಾಲ ಬದುಕಿ, ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. ಅವರಿಗೆ ನಾನು ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುವುದಕ್ಕೆ ಬಯಸುತ್ತಿದ್ದೇನೆ.

ಮಾನ್ಯ ಎನ್.ಡಿ. ಶಿವಕುಮಾರ್ ರವರು Times of India ಪತ್ರಿಕೆಯಲ್ಲಿ ವರದಿಗಾರರಾಗಿ ಕೆಲಸ ಮಾಡುತ್ತಿದ್ದರು. ವಿಶೇಷವಾಗಿ ರಾಜಕೀಯಕ್ಕೆ ಸಂಬಂಧಿಸಿದಂತೆ ವಿಶ್ಲೇಷಣೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದರು. ಅವರಿಗೆ ಕೇವಲ 39 ವರ್ಷವಾಗಿದ್ದು, ಬಹಳ ಚಿಕ್ಕ ವಯಸ್ಸಿನವರಾಗಿದ್ದರು. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. 4 ವರ್ಷಗಳ ಹಿಂದೆಯಷ್ಟೇ ಅವರು ಮದುವೆಯಾಗಿದ್ದರು. ಅವರಿಗೆ ಬಹಳ ಚಿಕ್ಕ ವಯಸ್ಸಿನ ಮಗು ಸಹ ಇದೆ. ಅವರ ಪತ್ನಿಯೂ ಸಹ ಚಿಕ್ಕ ವಯಸ್ಸಿನವರಾಗಿದ್ದಾರೆ. ದಿವಂಗತರು ಇನ್ನೂ ಬಹಳ ವರ್ಷಗಳ ಕಾಲ ಬದುಕಿರಬೇಕಾಗಿತ್ತು. ಪತ್ರಿಕೋದ್ಯಮದಲ್ಲಿ ಅವರಿಗೆ ಒಳ್ಳೆಯ ಭವಿಷ್ಯವಿತ್ತು. ಅವರು ಹಠಾತ್ತಾಗಿ ನಿಧನರಾಗಿದ್ದಾರೆ. ಅದರಲ್ಲಿಯೂ ಬೆಳಗಾವಿ ಅಧಿವೇಶನಕ್ಕೆ ವರದಿ ಮಾಡಲು ಬಂದಿದ್ದಂಥ ಸಂದರ್ಭದಲ್ಲಿ ನಿಧನ ಹೊಂದಿದ್ದಾರೆ. ಅವರ ನಿಧನವು ನಮಗೆ ಬಹಳ ನೋವನ್ನು ತಂದಿದೆ. ಕರ್ತವ್ಯದಲ್ಲಿರುವಾಗ ನಿನ್ನೆ ದಿವಸ ಆಸ್ಪತ್ರೆಯಲ್ಲಿ ಅವರು ಚಿಕಿತ್ಸೆಯನ್ನು ಪಡೆದುಕೊಂಡಿದ್ದಾರೆ. ಬಹುಶಃ ಅವರು ಆಸ್ಪತ್ರೆಯಲ್ಲೇ ಇರಬೇಕಾಗಿತ್ತು. ಅವರು ಆಸ್ಪತ್ರೆಯಲ್ಲಿಯೇ ಇದ್ದಿದ್ದರೆ ಅವರು ಬದುಕಿ ಉಳಿಯುತ್ತಿದ್ದರೇನೋ ಎಂದು ಜನರು ಮಾತನಾಡುತ್ತಿದ್ದಾರೆ. ಅವರು ತಮ್ಮ ಕರ್ತವ್ಯ ನಿಷ್ಠೆಯಿಂದ ನಾನು ಅಧಿವೇಶನಕ್ಕೆ ಹೋಗಬೇಕು, ರಿಪೋರ್ಟಿಂಗ್

ಮಾಡುವುದು ಬಹಳ ಇದೆ, ಆದ್ದರಿಂದ ನಾನು ಹೋಗಬೇಕಾಗಿದೆ ಎಂದು ಹೇಳಿ discharge ಮಾಡಿಸಿಕೊಂಡು ರೂಮಿಗೆ ಹೋಗಿದ್ದಾರೆ. ಅವರು ಆಸ್ಪತ್ರೆಯಲ್ಲಿಯೇ ಉಳಿದುಕೊಂಡು ಚಿಕಿತ್ಸೆಯನ್ನು ಪಡೆದುಕೊಂಡಿದ್ದರೆ ಅವರು ಬದುಕುತ್ತಿದ್ದರೇನೋ ಗೊತ್ತಿಲ್ಲ. ಸಾವು ಹೇಗೆ ಸಂಭವಿಸುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ನಮಗೆ ಗೊತ್ತಿಲ್ಲದೇ ಇರುವ ರೀತಿಯಲ್ಲಿ ಸಾವು ಸಂಭವಿಸಿ ಬಿಡುತ್ತದೆ. ಎನ್.ಡಿ. ಶಿವಕುಮಾರ್‌ರವರು ಬಹಳ ಚಿಕ್ಕ ವಯಸ್ಸಿಗೆ ನಿಧನರಾಗಿರುವುದು ನಮಗೆ ತುಂಬಲಾರದ ನಷ್ಟವನ್ನುಂಟು ಮಾಡಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಅವರ ನಿಧನದಿಂದ ಪತ್ರಿಕೋದ್ಯಮಕ್ಕೂ ಸಹ ಬಹಳ ನಷ್ಟವಾಗಿದೆ. ಅವರ ಆತ್ಮಕ್ಕೆ ಚಿರ ಶಾಂತಿ ದೊರಕಲಿ ಎಂದು ಪ್ರಾರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ತಾವು ತಂದಂಥ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಎಂ.ಪಿ. ವೆಂಕಟೇಶ್ ರವರು 2 ಬಾರಿ ಸದನದ ಸದಸ್ಯರಾಗಿ ಕೆಲಸ ಮಾಡಿದ್ದರು. 1989ರಲ್ಲಿ ಹಾಗೂ 2004 ರಲ್ಲಿ ಅವರು ಸದನದ ಸದಸ್ಯರಾಗಿ ಕೆಲಸ ಮಾಡಿದ ಸಂದರ್ಭದಲ್ಲಿ ನಾನು ಬಹಳ ಹತ್ತಿರದಿಂದ ಅವರನ್ನು ನೋಡಿದ್ದೇನೆ. ಅವರು ಬಹಳ ಕ್ರಿಯಾಶೀಲರಾಗಿ ಸದನದಲ್ಲಿ ಕೆಲಸ ಮಾಡಿದ ರೀತಿ ನಮ್ಮ ಕಣ್ಣು ಮುಂದೆ ಇದೆ. ಇವತ್ತು ಅಂಥ ಒಬ್ಬ ಕ್ರಿಯಾಶೀಲ ಶಾಸಕ ನಮ್ಮ ಮಧ್ಯದಲ್ಲಿ ಇಲ್ಲ. ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಇತ್ತೀಚೆಗೆ ಅವರು ನಿಧನ ಹೊಂದಿದರು. ಅವರ ಸಮಾಜ ಸೇವೆ ಹಾಗೂ ಅವರ ಕ್ಷೇತ್ರದ ಬಗ್ಗೆ ಅವರಲ್ಲಿ ಇದ್ದಂಥ ಕಳಕಳಿಯನ್ನು ಇವತ್ತಿನ ದಿವಸ ನಾವೆಲ್ಲರೂ ನೆನಪಿಸಿಕೊಳ್ಳಬೇಕಾಗುತ್ತದೆ. ಅಂಥವರ ಅಗಲಿಕೆ ನಮಗೆಲ್ಲರಿಗೂ ದುಃಖ ತರುವಂಥದ್ದಾಗಿದೆ. ಶ್ರೀ ಸಿ.ಆರ್. ಮೊಹಮದ್ ಸೈಫುದ್ದೀನ್‌ರವರು ಒಂದು ಬಾರಿ ಶಾಸಕರಾಗಿ ಕೆಲಸ ಮಾಡಿದ್ದಾರೆ. ವಕ್ಫ್ ಬೋರ್ಡಿನ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದಂಥವರು. ಅವರ ಅಗಲಿಕೆಯು ಅವರ ಕುಟುಂಬ ವರ್ಗದವರಿಗೆ ದುಃಖವನ್ನು ತಂದಿದೆ. ದಿವಂಗತರಿಗೆ ನಾನು ಶ್ರದ್ಧಾಂಜಲಿಯನ್ನು ಅರ್ಪಣೆ ಮಾಡುತ್ತೇನೆ. ನ್ಯಾಯಮೂರ್ತಿ ವಿ.ಆರ್. ಕೃಷ್ಣ

ಅಯ್ಯರ್ ಎಂದರೆ ಬಹಳ ಉತ್ತಮ ನ್ಯಾಯಾಧೀಶರು ಎನ್ನುವಂಥ ಪೂರಕವಾದ ಹೆಸರಿದೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ಕೃಷ್ಣ ಅಯ್ಯರ್ ರವರಿಗೆ ಬಹಳ ದೊಡ್ಡದಾದಂಥ ಹೆಸರು ಮತ್ತು ಗೌರವವಿದೆ. ಕೃಷ್ಣ ಅಯ್ಯರ್ ರವರು ಇಡೀ ನ್ಯಾಯಾಂಗ ವ್ಯವಸ್ಥೆಯಲ್ಲಿರುವವರೆಲ್ಲರು ಅವರನ್ನು ಬಹಳ ಗೌರವವಾಗಿ ಕಾಣುವಂಥ ವ್ಯಕ್ತಿಯಾಗಿದ್ದರು. ಸುದೀರ್ಘವಾಗಿ 7 ವರ್ಷಗಳ ಕಾಲ ಸುಪ್ರೀಂಕೋರ್ಟ್‌ನಲ್ಲಿ ನ್ಯಾಯಾಧೀಶರಾಗಿ ಕೆಲಸ ಮಾಡಿದಂಥವರು. ಹೈಕೋರ್ಟ್‌ನಿಂದ ಸುಪ್ರೀಂಕೋರ್ಟ್‌ಗೆ promotion ಆಗಿ ಹೋದಂಥವರು 2–3 ವರ್ಷಗಳ ಕಾಲ ಅವರ ಸೇವಾವಧಿ ಇರುತ್ತದೆ. ಸುಪ್ರೀಂಕೋರ್ಟ್‌ನ Chief Justice ಆಗಿರುವಂಥವರಿಗೆ ಕೇವಲ 10 ತಿಂಗಳು ಅಥವಾ ಒಂದು, ಒಂದೂವರೆ ವರ್ಷ ಮಾತ್ರ ಇತ್ತೀಚಿನ ದಿನಗಳಲ್ಲಿ ಅವಧಿ ಇರುವಂಥದ್ದನ್ನು ನಾವು ನೋಡಿದ್ದೇವೆ. ಇಷ್ಟೊಂದು ಸುದೀರ್ಘವಾಗಿ ಸುಪ್ರೀಂಕೋರ್ಟ್‌ನಲ್ಲಿ ಸೇವೆ ಸಲ್ಲಿಸಿರುವಂಥದ್ದು ಅವರ ನೆನಪು ಬಹುಶಃ ಎಲ್ಲರಲ್ಲಿಯೂ ಚಿರಸ್ಥಾಯಿಯಾಗಿ ಉಳಿಯುವುದಕ್ಕೆ ಕಾರಣವಾಗಿದೆ. ಏಕೆಂದರೆ, ಅವರು ಆ ಒಂದು ಪೀಠದಲ್ಲಿ ಕುಳಿತುಕೊಂಡು ಹಲವಾರು ಉತ್ತಮವಾದಂಥ, ಐತಿಹಾಸಿಕವಾದಂಥ ನಿರ್ಣಯಗಳನ್ನು ಕೊಟ್ಟಿರುವುದು ಇವತ್ತೂ ನಮ್ಮ ಕಣ್ಣು ಮುಂದೆ ಇವೆ. ಕೃಷ್ಣ ಅಯ್ಯರ್ ರವರ ಬಗ್ಗೆ ಒಂದು ಅಪಾರವಾದಂಥ ಗೌರವ ಆ ನ್ಯಾಯಾಂಗ ವ್ಯವಸ್ಥೆಯಲ್ಲಿ ಇದೆ. ಅವರು ಹಲವಾರು ಲೇಖನಗಳನ್ನು ಹಾಗೂ biography ಯನ್ನು ಬರೆದಿದ್ದಾರೆ. ಅವರು biography ಯನ್ನು ನಾವು ಓದಿದರೆ, ನ್ಯಾಯಾಂಗ ವ್ಯವಸ್ಥೆ ಬಗ್ಗೆ ನಮಗೆ ಬಹಳಷ್ಟು ಮಾಹಿತಿ ಸಿಗುತ್ತದೆ. ಕೇವಲ ನ್ಯಾಯಾಂಗ ದೃಷ್ಟಿಕೋನವನ್ನು ಇಟ್ಟುಕೊಂಡು ಅವರು ತಮ್ಮ ಲೇಖನಗಳನ್ನು ಬರೆಯಲಿಲ್ಲ. ಇಡೀ ಸಮಾಜದಲ್ಲಿರುವ ಅಂಕು-ಡೊಂಕುಗಳು, ಬೇರೆ ಬೇರೆ ವಿಚಾರದ ಬಗ್ಗೆ ಯಾವ ರೀತಿಯ ಒಂದು policy decision ಅನ್ನು ನಾವು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ, ಹೀಗೆ ಹಲವಾರು ವಿಚಾರಗಳ ಬಗ್ಗೆ ಕೃಷ್ಣ ಅಯ್ಯರ್‌ರವರು ಬಹಳ ಅರ್ಥಪೂರ್ಣವಾದಂಥ ಲೇಖನಗಳನ್ನು ಬರೆದಿರುವಂಥದ್ದು ನಮ್ಮ ಕಣ್ಣು ಮುಂದೆ ಇದೆ. ಅವರು ಬೇರೆ ಬೇರೆ debate ಗಳಲ್ಲಿ participate

ಮಾಡಿದಂಥ ಸಂದರ್ಭದಲ್ಲಿ ಅವರು ಕೊಟ್ಟಂಥ ವಿಚಾರಗಳು ಎಲ್ಲೋ ಒಂದು ಕಡೆ ಮಾರ್ಗದರ್ಶನ ಇರುವಂಥ ವಿಚಾರಗಳಾಗಿವೆ. ಹೀಗಾಗಿ, ನನ್ನ ಪ್ರಕಾರ, ಒಬ್ಬ ನ್ಯಾಯಾಧೀಶ ಹೇಗಿರಬೇಕು ಎಂಬುದಕ್ಕೆ ನಾವು ಒಂದು ಅರ್ಥಪೂರ್ಣವನ್ನು ತರಬೇಕಾದರೆ ಅದು ವಿ.ಆರ್. ಕೃಷ್ಣ ಅಯ್ಯರ್ ರವರ ರೀತಿಯಲ್ಲಿ ಇರಬೇಕು. ಆ ರೀತಿಯ ಒಂದು role model ಅನ್ನು ಅವರು ಆ ನ್ಯಾಯಾಂಗ ವ್ಯವಸ್ಥೆಯಲ್ಲಿ ತಂದಿದ್ದರು. ಕೃಷ್ಣ ಅಯ್ಯರ್‌ರವರ ಅಗಲಿಕೆಯು ನ್ಯಾಯಾಂಗ ವ್ಯವಸ್ಥೆಗೆ ಹಾಗೂ ಸಮಾಜಕ್ಕೆ ಒಂದು ದೊಡ್ಡ ನಷ್ಟವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಅವರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತಿದ್ದೇನೆ. ಶ್ರೀ ಎನ್.ಡಿ. ಶಿವಕುಮಾರ್‌ರವರು ನಿನ್ನೆ–ಮೊನ್ನೆವರೆಗೂ ಸಹಿತ ಇಲ್ಲೇ ಇದೇ ಸದನದಲ್ಲಿ ಬಂದು ಮಾಧ್ಯಮದ ಗ್ಯಾಲರಿಯಲ್ಲಿ ಕುಳಿತು ಇಲ್ಲಿಯ ಕಲಾಪಗಳನ್ನು ವೀಕ್ಷಣೆ ಮಾಡಿ ರಿಪೋರ್ಟ್ ಮಾಡುವಂಥದ್ದನ್ನೆಲ್ಲವನ್ನೂ ನಾವು ನೋಡಿದ್ದೇವೆ. ಬೆಂಗಳೂರಿನಲ್ಲಿ ಸಹಿತ ಅವರು ತಮ್ಮ ಕಾರ್ಯಚಟುವಟಿಕೆ ಮುಖಾಂತರ ಮತ್ತು Times of Indiaದಲ್ಲಿ ರಾಜಕೀಯ ವಿಶ್ಲೇಷಣೆಯ ಲೇಖನಗಳನ್ನು ಬರೆಯುವುದರ ಮುಖಾಂತರ ಅಪಾರವಾದ ಗೌರವವನ್ನು ಗಳಿಸಿಕೊಂಡಿದ್ದರು. ತಮ್ಮ ಜ್ಞಾನದ ಮುಖಾಂತರ, analysis ಮುಖಾಂತರ ರಾಜಕೀಯ ವಿಶ್ಲೇಷಣೆಯನ್ನು ಬಹಳ ಪರಿಣಾಮಕಾರಿಯಾಗಿ ಮಾಡುವಂಥ ಕೆಲಸವನ್ನು ಮಾನ್ಯ ಎನ್.ಡಿ. ಶಿವಕುಮಾರ್‌ರವರು ಮಾಡುತ್ತಿದ್ದರು. ನಿನ್ನೆವರೆಗೂ ಇದ್ದಂಥದವರು, ನಿನ್ನೆ ಸಾಯಂಕಾಲ ಅವರು ಆಸ್ಪತ್ರೆಗೆ ಹೋಗಿದ್ದರು. ಬಹುಶಃ ಟ್ರೀಟ್‌ಮೆಂಟ್‌ನ್ನು continue ಮಾಡಿದ್ದರೆ ಬದುಕಿ ಉಳಿಯುತ್ತಿದ್ದರೇನೋ, ನಾನು ನಿನ್ನೆ ದಿವಸ ಅವರ ಪಾರ್ಥಿವ ಶರೀರವನ್ನು ವೀಕ್ಷಣೆ ಮಾಡಲು ಹೋಗಿದ್ದೆನು. ಆ ಸಂದರ್ಭದಲ್ಲಿ ಅಲ್ಲಿ ಕೇಳಿಬಂದಂಥ ಅವರ ಎಲ್ಲಾ ಸ್ನೇಹಿತರ ಅಭಿಪ್ರಾಯ, ನಿನ್ನೆ ಸಾಯಂಕಾಲ ಅವರು ಆಸ್ಪತ್ರೆಗೆ adimit ಆಗಿ ಅಲ್ಲೇ ಟ್ರೀಟ್‌ಮೆಂಟ್ ಪಡೆದುಕೊಂಡು continue ಆಗಿದ್ದರೆ ಅವರು ಉಳಿಯಬಹುದಾಗಿತ್ತು ಎನ್ನುವುದು ಎಲ್ಲರ ಭಾವನೆಯಾಗಿತ್ತು. ಹೀಗಾಗಿ ಅವರು ಬಹಳ ಸಣ್ಣ ವಯಸ್ಸಿನಲ್ಲಿ ನಮ್ಮನ್ನೆಲ್ಲಾ ಅಗಲಿದ್ದಾರೆ. ಅವರ ಕುಟುಂಬ ಇವತ್ತು

ದುಃಖದಲ್ಲಿದೆ. ಹೀಗಾಗಿ ಅವರು ಏನು ಸೇವೆ ಸಲ್ಲಿಸಿದ್ದಾರೆ ಅದನ್ನು ನಾವೆಲ್ಲರೂ ನೆನಪು ಮಾಡಿಕೊಳ್ಳಬೇಕು. ಎಲ್ಲಾ ಮಹನೀಯರು ಏನಿವತ್ತು ಅಗಲಿದ್ದಾರೆ, ಆ ಅಗಲಿಕೆಯ ದುಃಖ ಅವರ ಕುಟುಂಬವರ್ಗದವರಿಗೆ, ಅವರ ಅಭಿಮಾನಿಗಳಿಗೆ ಭರಿಸುವಂಥ ಶಕ್ತಿಯನ್ನು ದೇವರು ದಯಪಾಲಿಸಲಿ ಎಂದು ಹೇಳಿ ನಾನು ಪ್ರಾರ್ಥನೆಯನ್ನು ಮಾಡಿ ಅವರಿಗೆ ಶ್ರದ್ಧಾಂಜಲಿಯನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ವೈ.ಎಸ್.ವಿ. ದತ್ತಾ (ಕಡೂರು):– ಮಾನ್ಯ ಸಭಾಧ್ಯಕ್ಷರೆ, ಇಂದು ತಾವು ಮಂಡಿಸಿರುವಂಥ ಸಂತಾಪ ಸೂಚನೆಗೆ ನಾನು ಮತ್ತು ನಮ್ಮ ಪಕ್ಷ ಸಂಪೂರ್ಣವಾಗಿ ಬೆಂಬಲ ವ್ಯಕ್ತಪಡಿಸುತ್ತಾ ಮೊದಲಿಗೆ ಎಂ.ಪಿ. ವೆಂಕಟೇಶ್‌ರವರು ಒಂದು ರೀತಿಯಲ್ಲಿ ನಮ್ಮ ಪಕ್ಷಕ್ಕೆ ಹೆಚ್ಚು ಹತ್ತಿರವಾಗಿದ್ದವರು. 1988ರಲ್ಲಿ ಆದ ದುರಂತ, ಜನತಾ ಪಕ್ಷ ವಿಭಜನೆಯಾಗಿ ಸಮಾಜವಾದಿ ಜನತಾ ಪಕ್ಷ ಎಂದು ವಿಭಜನೆಯಾಗಿ ಒಂದು ಪ್ರಾದೇಶಿಕ ಸ್ವರೂಪದ ಪಕ್ಷ 1989ರ ಚುನಾವಣೆಯಲ್ಲಿ ಸ್ಪರ್ಧೆ ಮಾಡಿತು. ಆ ಪಕ್ಷದಿಂದ ಆ ಸಂದರ್ಭದಲ್ಲಿ ಈ ವಿಧಾನಸಭೆಗೆ ಇಬ್ಬರೇ ಇಬ್ಬರು ಸದಸ್ಯರು ಗೆದ್ದರು. ಒಂದು ಹೆಗ್ಗಡದೇವನಕೋಟೆಯಿಂದ ವೆಂಕಟೇಶ್ ಮತ್ತೊಂದು ವೇಮಗಲ್ ಕ್ಷೇತ್ರದಿಂದ ಭೈರೇಗೌಡರು ಗೆದ್ದರು. ಹಾಗಾಗಿ ಆ ಇಬ್ಬರೇ ಸದಸ್ಯರುಗಳು ಈ ಸದನದಲ್ಲಿ ಇದ್ದರೂ ಸಹ ಅಷ್ಟರಮಟ್ಟಿಗೆ ಪ್ರಖರವಾಗಿ ತಮ್ಮ ಅಸ್ಮಿತ್ವವನ್ನು ವಿಧಾನಸೌಧದಲ್ಲಿ ಭೈರೇಗೌಡ ಮತ್ತು ವೆಂಕಟೇಶ್‌ರವರು ಒಂದೇ ಪಕ್ಷದ ಸದಸ್ಯರಾಗಿ ಸಮಾಜವಾದಿ ಜನತಾ ಪಕ್ಷದಲ್ಲಿ ಹೋರಾಟ, ಸದನದ ಕಲಾಪದಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಳ್ಳುವುದರ ಮುಖಾಂತರ ಮಾಡುತ್ತಿದ್ದರು. ಹಾಗಾಗಿ, ನನಗೂ ಸಹ ಅತ್ಯಂತ ಆತ್ಮೀಯರಾಗಿದ್ದರು. 1985ರ ದಶಕದಿಂದ ಅವರ ಒಡನಾಟದಲ್ಲಿ ನಾನೂ ಸಹ ಕೆಲಸ ಮಾಡಿದವನು. ವೆಂಕಟೇಶ್‌ರವರು ತುಂಬಾ ಸಂಭಾವಿತ ಮತ್ತು ಒಳ್ಳೆಯ ಸ್ನೇಹಜೀವಿ. ಇಂಥ ಶಾಸಕರು ಇವತ್ತು ನಮ್ಮನ್ನಗಲಿದ್ದಾರೆ. ಅವರಿಗೆ ಶ್ರದ್ಧಾಂಜಲಿಯನ್ನರ್ಪಿಸುತ್ತೇನೆ.

ಅದೇ ರೀತಿ ಸಿ.ಆರ್. ಮೊಹಮದ್ ಸೈಫುದ್ದೀನ್‌ರವರ ಆತ್ಮಕ್ಕೂ ಶಾಂತಿಯನ್ನು ಕೋರುತ್ತಾ ವಿ.ಆರ್. ಕೃಷ್ಣ ಅಯ್ಯರ್‌ರವರ ಬಗ್ಗೆ ಈಗಾಗಲೇ ಎಲ್ಲರೂ ಹೇಳಿದ್ದಾರೆ. ಮುಖ್ಯವಾಗಿ ಕೃಷ್ಣ ಅಯ್ಯರ್‌ರವರು ಈಗ ಈ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತವಾಗುತ್ತಾರೆಂದು ಅನಿಸುತ್ತದೆ. ಎಡಪಂಥೀಯ ಚಿಂತನೆಗಳಿಂದ ಬಂದಂಥ ಕೃಷ್ಣ ಅಯ್ಯರ್‌ರವರು ಮೊದಲ ಕಮ್ಯುನಿಸ್ಟ್ ಸರ್ಕಾರದಲ್ಲಿ ಸಚಿವರಾಗಿದ್ದಕ್ಕಿಂತ ಹೆಚ್ಚಿಗೆ ಅವರ ರಾಜಕೀಯ, ಸಾಮಾಜಿಕ, ಆರ್ಥಿಕ ನೀತಿ ನಿರೂಪಣೆಗಳೆಲ್ಲವೂ ಸಹ ಹೆಚ್ಚು ವೈಚಾರಿಕವಾಗಿತ್ತು. ವರ್ಗ ಸಂಘರ್ಷದ ಮೂಲ ಸೆಲೆಯಿಂದ ಬಂದಂಥದ್ದಾಗಿತ್ತು ಮತ್ತು ಯಾವಾಗಲೂ ಸಹ ಅವರು ground realities, ನೆಲದ ವಾಸ್ತವಗಳನ್ನು ಅರ್ಥ ಮಾಡಿಕೊಂಡೇ ತಮ್ಮ ತೀರ್ಪುಗಳನ್ನು ಕೊಡುತ್ತಿದ್ದರು. ಎಲ್ಲೋ ಒಂದು ಕಡೆ ನ್ಯಾಯಾಂಗ ವ್ಯವಸ್ಥೆಯಲ್ಲಿ ಕೆಲವು ಸಂದರ್ಭಗಳಲ್ಲಿ ತೀರ್ಪುಗಳು ನೆಲದ ವಾಸ್ತವಕ್ಕೆ ಎಲ್ಲೋ ಸ್ವಲ್ಪ ಹೊಂದಿಕೆಯಾಗುವುದಿಲ್ಲವೇನೋ ಎನ್ನುವ ರೀತಿಯ ಸಂದರ್ಭ ಹೆಚ್ಚೆಚ್ಚು ಬರುತ್ತಿರುವಂಥ ಸಂದರ್ಭದಲ್ಲಿ ಕೃಷ್ಣ ಅಯ್ಯರ್‌ರವರು ಆ ಜನ ಸಮುದಾಯದಿಂದ ಬಂದಂಥ ಸಂದರ್ಭದಲ್ಲಿ ಮತ್ತು ಅವರು ಪ್ರಖರ ವಿಚಾರವಾದಿಗಳು, ಚಿಂತಕರು. ಸಾಮಾನ್ಯವಾಗಿ ಎಡ ಪಂಥೀಯ ಚಿಂತನೆಗಳಿರುವವರೆಲ್ಲರೂ ಸಹ ಅಧ್ಯಯನಶೀಲರಾಗಿರುತ್ತಾರೆ, ಚಿಂತನೆ ಇರುತ್ತದೆ, ಪ್ರಗತಿಪರವಾದ ಧೋರಣೆಗಳು ಇರುತ್ತವೆ, ವೈಚಾರಿಕವಾದ ನೆಲೆಗಟ್ಟಿರುತ್ತದೆ. ಹಾಗಾಗಿ ಅವರ ತೀರ್ಪುಗಳು ಕೇವಲ ಯಾವುದೋ ಕೇಸ್‌ಗೋಸ್ಕರ ಬಳಕೆ ಮಾಡುವಂಥ judgmentಗಳಲ್ಲ, ಅವು ಒಂದು ರೀತಿ ಸಮಾಜದ ವ್ಯವಸ್ಥೆಯನ್ನು ಪುನರ್‌ರೂಪಿಸುವುದರೊಳಗೆ ಬೆಳಕು ಚೆಲ್ಲುವಂಥ ತೀರ್ಪುಗಳಾಗಿದ್ದವೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಅಂಥ ಪ್ರಖರ ಶತಾಯುಷಿ, ವಿಚಾರವಾದಿ ಇವತ್ತು ನಮ್ಮನ್ನಗಲಿದ್ದಾರೆ. ಅವರಿಗೂ ಸಹ ನಾನು ಶ್ರದ್ಧಾಂಜಲಿಯನ್ನರ್ಪಿಸುತ್ತಿದ್ದೇನೆ.

ಶ್ರೀ ಎನ್.ಡಿ. ಶಿವಕುಮಾರ್‌ರವರು ನನಗೆ ಅತ್ಯಂತ ದೀರ್ಘಕಾಲದ ಗೆಳೆಯರಾಗಿದ್ದರು. ಸಾಮಾನ್ಯವಾಗಿ ನನಗೂ ಪತ್ರಿಕಾಲೋಕಕ್ಕೂ ತುಂಬಾ ವರ್ಷಗಳಿಂದ ಬಹಳ ಸ್ನೇಹವಿದೆ. ಅದರಲ್ಲಿಯೂ ಸಹ ಶಿವಕುಮಾರ್‌ರವರನ್ನು ನಾವು ಹೆಚ್ಚು ಜ್ಞಾಪಿಸಿಕೊಳ್ಳುವುದಕ್ಕೆ ಕಾರಣವೆಂದರೆ ಬಹಳ ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡಿದ್ದಾರೆ, ಕೇವಲ 39 ವರ್ಷ ವಯಸ್ಸಿನವರು, ಅದರಲ್ಲಿಯೂ ಬೆಳಗಾವಿ ಅಧಿವೇಶನಕ್ಕೆ ಬಂದಾಗ ಕರ್ತವ್ಯನಿರತರಾಗಿದ್ದಾಗ ತೀರಿಕೊಂಡಿದ್ದಾರೆ. ಶಿವಕುಮಾರ್‌ರವರು ಏಕೆ ನನಗೆ print mediaದಲ್ಲಿ ಇತ್ತೀಚಿನ ದಿನಗಳಲ್ಲಿ ಮುದ್ರಣ ಮಾಧ್ಯಮಗಳಲ್ಲಿ ಎಲ್ಲೋ ಒಂದು ಕಡೆ ತನಿಖಾ ವರದಿಗಳು ಹೆಚ್ಚಾಗಿ ಬರುತ್ತಿಲ್ಲ. ಒಂದು ಕಾಲದೊಳಗೆ ಈಗ electronic ಮಾಧ್ಯಮಗಳಿದೆ, ಆದರೆ ಒಂದು ಕಾಲದಲ್ಲಿ ಮುದ್ರಣ ಮಾಧ್ಯಮಗಳಲ್ಲಿ ಯಾವುದಾದರೊಂದು ಅಕ್ರಮ, ಅವ್ಯವಹಾರ, ಭ್ರಷ್ಟಾಚಾರ ಇಂಥದರ ಬಗ್ಗೆ ತನಿಖಾ ವರದಿಗಳು ಬಂದರೆ ಅದನ್ನು ಎಲ್ಲರೂ ಸಹ ರಾಜಕಾರಣಿಗಳು, ಆಡಳಿತ ಪಕ್ಷ, ವಿರೋಧ ಪಕ್ಷ ಬಹಳ ಗಂಭೀರವಾಗಿ ಪರಿಗಣಿಸುತ್ತಿದ್ದವು. ಇತ್ತೀಚೆಗೆ ಮುದ್ರಣ ಮಾಧ್ಯಮಗಳಲ್ಲಿ ಅಂಥ ತನಿಖಾ ವರದಿಗಳು ಬರುತ್ತಿವೆ, ಆದರೆ ಅದರೊಳಗಡೆ ತನಿಖಾ ವರದಿಗೆ ಹೇಳಿ ಮಾಡಿಸಿದಂಥ ಹೆಸರು Times of Indiaದ ವಿಶೇಷ ಪ್ರತಿನಿಧಿಯಾಗಿ ಶಿವಕುಮಾರ್‌ರವರಾಗಿದ್ದರು. ಚಿಕ್ಕ ವಯಸ್ಸಿನಲ್ಲೇ ಕರ್ತವ್ಯನಿರತಾಗಿ ಅದೂ ಬೆಳಗಾವಿಯಲ್ಲಿ ಅಧಿವೇಶನ ಇನ್ನೂ ಒಂದು ವಾರಗಳ ಕಾಲ ನಡೆಯುವ ಸಂದರ್ಭದಲ್ಲಿ ಇಲ್ಲೇ ನಮ್ಮ ಒಟ್ಟಿಗೆ ಓಡಾಡಿಕೊಂಡು ನಿನ್ನೆ ಮೊನ್ನೆಯೆಲ್ಲಾ ನಮ್ಮ ಜೊತೆಗೆ ಹರಟಿಕೊಂಡಿದ್ದಂಥ ವ್ಯಕ್ತಿ ಇವತ್ತು ದಿಢೀರ್ ನಮ್ಮಿಂದ ದೂರವಾಗಿದ್ದಾರೆಂದರೆ ನಂಬುವುದಕ್ಕೆ ಆಗುವುದಿಲ್ಲ. ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ. ನೀವು ತಂದಿರುವಂಥ ಸಂತಾಪ ಸೂಚನಾ ನಿರ್ಣಯಕ್ಕೆ ನಾನು ಬೆಂಬಲ ವ್ಯಕ್ತಪಡಿಸುತ್ತೇನೆ.

ಅಧ್ಯಕ್ಷರು:– ರಮೇಶ್‌ಕುಮಾರ್‌ರವರು.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ):– ನನ್ಮಾನ್ಯ ಅಧ್ಯಕ್ಷರೆ, ತಾವು ಸಂತಾಪ ಸೂಚನೆಯನ್ನು ಸಭೆಯ ಮುಂದೆ ಇಟ್ಟಿದ್ದೀರಿ. ಗೆಳೆಯ ವೆಂಕಟೇಶ್‌ರವರ ತಂದೆ ಪೀರಣ್ಣನವರು ಈ ಸದನದ ಸದಸ್ಯರಾಗಿ 3 ಬಾರಿ ಕೆಲಸ ಮಾಡಿದ್ದಾರೆ, ವಿಧಾನಪರಿಷತ್‌ನಲ್ಲಿಯೂ ಕೆಲಸ ಮಾಡಿದ್ದಾರೆ. ಚಿಕ್ಕ ವಯಸ್ಸು, ಎರಡು ಬಾರಿ ಸದನದಲ್ಲಿದ್ದು ಇನ್ನೂ ಬಹಳ ವರ್ಷಗಳ ಕಾಲ ನಮ್ಮ ಮಧ್ಯೆ ಇರಬೇಕಾಗಿತ್ತು.

ಮೊಹಮ್ಮದ್ ಸೈಫುದ್ದೀನ್‌ರವರು ಇಂದಿರಾ ಗಾಳಿ ಬೀಸಿದಾಗ ಮೊದಲನೆ ಬಾರಿಗೆ ಚಿತ್ರದುರ್ಗದಲ್ಲಿ ಒಬ್ಬ ಅಲ್ಪಸಂಖ್ಯಾತ ವರ್ಗಕ್ಕೆ, ಸಮಾಜಕ್ಕೆ ಸೇರಿದವರು ಆರಿಸಿ ಬರುವುದಕ್ಕೆ ಕಾರಣರಾದರು. ಆಮೇಲೆ ಮತ್ತೆ ಅವರು ಬರುವುದಕ್ಕೆ ಆಗಲಿಲ್ಲ. ವಕ್ಫ್ ಬೋರ್ಡ್‌ನ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ.

ಕೃಷ್ಣ ಅಯ್ಯರ್‌ರವರ ವಿಚಾರಕ್ಕೆ ಸಂಬಂಧಪಟ್ಟಂತೆ ಮಂಗಳವಾರವೇ ನಾವು ಸಂತಾಪ ಸೂಚನೆ ವ್ಯಕ್ತಪಡಿಸಬೇಕಾಗಿತ್ತೆಂದು ನಾನು ತಮ್ಮ ಕೊಠಡಿಗೆ ಬಂದು ಹೇಳಿದೆ. ಒಬ್ಬ ವಕೀಲರಾಗಿ ತನ್ನ ವೃತ್ತಿಯನ್ನು ಪ್ರಾರಂಭ ಮಾಡುತ್ತಾರೆ. ಕಾರ್ಮಿಕ ಚಳುವಳಿಯ ನೇತೃತ್ವವನ್ನು ವಹಿಸುತ್ತಾರೆ. ಜೈಲಿನ ರುಚಿಯನ್ನು ಅವರು ನೋಡುತ್ತಾರೆ. 21 ದಿವಸಗಳ ಕಾಲ bail ಸಿಗದೆ ಜೈಲಿನಲ್ಲಿರುತ್ತಾರೆ. ಅದು ಇಂಥ ತೀವ್ರ ಪರಿಣಾಮ ಅವರ ಮನಸ್ಸಿನ ಮೇಲೆ ಆಗುತ್ತದೆ. ನಂತರ ಅವರು ಕಮ್ಯುನಿಸ್ಟ್ ಪಾರ್ಟಿಗೆ ಸೇರುತ್ತಾರೆ. ಮೊದಲನೆಯ Communist Government, Non Congress Government ಭಾರತದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಕೇರಳದಲ್ಲಿ 1957ರಲ್ಲಿ ದಿವಂಗತ ನಂಬೂದರಿ ಪಾದ್‌ರವರ ನೇತೃತ್ವದಲ್ಲಿ ಆದಂಥ ಸರ್ಕಾರದಲ್ಲಿ ಇವರು ಮಂತ್ರಿಗಳಾಗುತ್ತಾರೆ. ನಂತರ ಅಲ್ಲಿಂದ ಹೊರಗೆ ಬಂದು ವಕೀಲ ವೃತ್ತಿಯನ್ನು ಮುಂದುವರೆಸಿಕೊಂಡು ಬರುತ್ತಾರೆ. Barನಿಂದ straight High Court Benchಗೆ ಬರುತ್ತಾರೆ. ಅಲ್ಲಿಂದ ಸುಪ್ರೀಂ ಕೋರ್ಟಿಗೆ ಬರುತ್ತಾರೆ. ಬಹಳ ಜನ ಸುಪ್ರೀಂ ಕೋರ್ಟಿಗೆ ಬಂದಿದ್ದಾರೆ, ಹೋಗಿದ್ದಾರೆ. ಆದರೆ, ಇವರದ್ದು unconventional way as a Judge, ಸುಪ್ರೀಂ ಕೋರ್ಟಿನ ಬೆಂಚ್‌ನಲ್ಲಿ ಜಡ್ಜ್

ಆಗಿದ್ದುಕೊಂಡು ಸುಪ್ರೀಂ ಕೋರ್ಟ್‌ನ್ನು ವಿಮರ್ಶೆ ಮಾಡಿದಂಥ ಮೊದಲನೇ ಜಡ್ಜ್ ಆಗುತ್ತಾರೆ. ಅವರ ಮೂರು ಹೇಳಿಕೆಗಳು ಬಹಳ ಪರಿಣಾಮಕಾರಿಯಾಗಿರುವಂಥದ್ದು. The first statement is "Supreme Court is final, because there is no further appeal, But Supreme Court is not infallible" ಎಂದು ಹೇಳಿ ಸುಪ್ರೀಂ ಕೋರ್ಟಿನಲ್ಲಿ ಏನೇನು ತಪ್ಪುಗಳಾಗುತ್ತದೆನ್ನುವ ಕುರಿತು ಒಂದು ಪುಸ್ತಕವನ್ನೇ ಅವರು ಬರೆಯುತ್ತಾರೆ.

ಎರಡನೆಯದಾಗಿ the most important thing. "Judgment and Justice, they don't meet together" ಎಂದು ಹೇಳುತ್ತಾರೆ. "ತೀರ್ಪು ಮತ್ತು ನ್ಯಾಯ ಒಟ್ಟಿಗೆ ಇರುವುದಿಲ್ಲವಂತೆ," ನಮ್ಮ ಕೋರ್ಟುಗಳೇನಿವೆ Medieval Institutions, ಶಿಲಾಯುಗದ್ದು ಇವು, 'They are the institutions that promote injustice' ಎಂದು ಹೇಳುತ್ತಾರೆ. Being a judge of the Supreme Court ಎಲ್ಲಿಯವರೆಗೆ "Judgment and justice ಒಟ್ಟಿಗೆ ಬರುವುದಿಲ್ಲವೋ ಅಲ್ಲಿಯವರೆಗೆ ಈ ನ್ಯಾಯ ವಿತರಣೆ ವ್ಯವಸ್ಥೆಯಲ್ಲಿ ಜನರಿಗೆ ವಿಶ್ವಾಸ ಬರುವುದಿಲ್ಲ" ಎನ್ನುವಂಥ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತಾರೆ. ಅವರು ಜಸ್ಟೀಸ್ ಜಗಮೋಹನಲಾಲ್ ಸಿನ್ಹಾರವರು ಇಂದಿರಾಗಾಂಧಿಯವರನ್ನು ಹೈಕೋರ್ಟಿನಲ್ಲಿ ಅನೂರ್ಜಿತಗೊಳಿಸಿರುತ್ತಾರೆ, ಅಪೀಲ್ ಹೈಕೋರ್ಟಿನಿಂದ ಸುಪ್ರೀಂ ಕೋರ್ಟಿಗೆ ಬಂದಾಗ ಅದು ಇವರ ಮುಂದೆ ಬರುತ್ತದೆ. ಅವರಿಗೆ ಹಿಂದಿನ ದಿವಸ ಒಂದು anonymous telephone call ಬರುತ್ತದೆ. "ನೀನು ಇಂದಿರಾಗಾಂಧಿಯವರಿಗೆ stay ಕೊಡದೇ ಹೋದರೆ ನಿನ್ನ ಹೆಂಡತಿ ವಿಧವೆಯಾಗಬೇಕಾಗುತ್ತದೆಂದು" ಅವರ ಆತ್ಮಚರಿತ್ರೆಯಲ್ಲಿ ಬರೆಯುತ್ತಾರೆ. 'ನಾನು ಇದೇ ತಾನೆ ಒಂದು ತಿಂಗಳಾಗಿದೆ. ನನ್ನ ಹೆಂಡತಿ ಕಮಲ ಕ್ಯಾನ್ಸರ್‌ನಿಂದ ನರಳುತ್ತಿದ್ದಳು, ಅವಳನ್ನು ಕಳೆದುಕೊಂಡು ಬಂದಿದ್ದೇನೆ. ನಾನು ಪುನಃ ನನ್ನ ಹೆಂಡತಿ ವಿಧವೆಯಾಗುವುದಕ್ಕೆ chance ಕೊಡುವುದಕ್ಕೆ ಅವಕಾಶವಿಲ್ಲ.' ಆದರೆ, 'ಈ ಫೋನ್ ಕಾಲ್‌ನ್ನು ನನಗೆ ಮಾಡಿದಂಥವರು ಎರಡು ಕಾರಣಗಳಿಗಾಗಿ ಮಾಡಿರಬಹುದು. ಇಂದಿರಾಗಾಂಧಿಯವರ ಅತ್ಯುತ್ಸಾಹೀ ಬೆಂಬಲಿಗರಾಗಿ ನನ್ನನ್ನು ಹೆದರಿಸುವುದಕ್ಕೂ ಮಾಡಿರಬಹುದು

ಅಥವಾ ಇಂದಿರಾಗಾಂಧಿಯವರ ಬಗ್ಗೆ ನನಗೆ ಕೆಟ್ಟ ಅಭಿಪ್ರಾಯ ಬಂದು ಸಿಟ್ಟಿನಲ್ಲಿ ಅವರಿಗೆ ತೊಂದರೆ ಮಾಡಲಿ ಎಂದು ಸಹ ಮಾಡಿರಬಹುದು, ನಾನು facts ಮೇಲೆ ಹೋಗುತ್ತೇನೆಯೇ ಹೊರತು ಇಂಥದ್ದರ ಮೇಲೆ ಹೋಗುವುದಿಲ್ಲ' ಎನ್ನುವಂಥ ಮಾತನ್ನು ಹೇಳುತ್ತಾರೆ. ಅವರ judgment ಅನ್ನು dictionary ಇಲ್ಲದೆ ಓದುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅಂತಹ ಒಂದು ಅಸಂಪ್ರದಾಯಿಕ ತೀರ್ಪನ್ನು ಕೊಡುವ ಶಕ್ತಿ ಆತನಿಗೆ ಮಾತ್ರ ಸಾಧ್ಯವಿತ್ತು. ನ್ಯಾಯ ವಿತರಣೆಯ ವ್ಯವಸ್ಥೆಯಲ್ಲಿಯೇ ಒಂದು ರೀತಿಯ ಕ್ರಾಂತಿಯನ್ನು ಮಾಡಿದಂತಹ ವ್ಯಕ್ತಿ. ಅಂತಹ ವ್ಯಕ್ತಿಗಳು ಹುಟ್ಟುವುದೇ ವಿರಳ. ಅದಕ್ಕಾಗಿಯೇ ನಾನು ತಮ್ಮಲ್ಲಿ ಬಂದು ಎಲ್ಲೋ ನಾವು ಎಚ್ಚರ ತಪ್ಪಿದ್ದೇವೆ, ಅವರಿಗೆ ಸಂತಾಪ ಸೂಚಿಸಬೇಕೆಂದು ವಿಶೇಷವಾಗಿ ಪ್ರಾರ್ಥನೆ ಮಾಡಿಕೊಂಡೆ. ನಾವು ಸೂಚಿಸುವ ಸಂತಾಪ ಅವರಿಗೆ ಮುಟ್ಟುತ್ತೋ ಅಥವಾ ಇಲ್ಲವೋ ಎನ್ನುವುದು ಬೇರೆ ಪ್ರಶ್ನೆ. ಇಂತಹ ವ್ಯಕ್ತಿಗಳನ್ನು ನೆನಪು ಮಾಡಿಕೊಳ್ಳುವುದರಿಂದ ಎಲ್ಲೋ ಒಂದು ಕಡೆಗೆ, ದಿನದಿಂದ ದಿನಕ್ಕೆ ಏನು ಕುಸಿಯುತ್ತಿದ್ದೇವೆ ಅದರಿಂದ ಪುನಃ ಏನಾದರೂ ಇಂತಹವರನ್ನು ನೆನಪಿಸಿಕೊಳ್ಳುವುದರಿಂದ ಚೇತರಿಸಿಕೊಳ್ಳಬಹುದೆಂಬ ಪ್ರಯತ್ನವನ್ನು ಮಾಡಬೇಕು.

ಗೆಳೆಯ ಶಿವಕುಮಾರ್ ಅವರ ಪರಿಚಯ ನನಗೆ ಇರಲಿಲ್ಲ. ಅನೇಕ ಜನ ಪತ್ರಿಕಾ ಪ್ರತಿನಿಧಿಗಳು ಮಿತ್ರರು ಗ್ಯಾಲರಿಯಲ್ಲಿ ಕುಳಿತಿದ್ದಾರೆ. ಅವರಲ್ಲಿ ನನ್ನ ವಿನಂತಿಯೇನೆಂದರೆ ನಮ್ಮನ್ನು ನೋಡಿ ನೀವು ಕಲಿತುಕೊಳ್ಳಬೇಕು. ನಾವೂ ಎಲ್ಲವನ್ನೂ ಮಾಡುತ್ತೇವೆ, ಪ್ರಾಣವನ್ನು ಉಳಿಸಿಕೊಳ್ಳುತ್ತೇವೆ. ನೀವು ಏನೇನೋ ಮಾಡುವುದಕ್ಕೆ ಹೋಗಿ ಪ್ರಾಣವನ್ನೇ ಕಳೆದುಕೊಳ್ಳುತ್ತೀರಿ. ಬೇರೆ ಎಲ್ಲದರಲ್ಲೂ ನಮ್ಮನ್ನು copy ಮಾಡಬೇಡಿ. ಈ ಒಂದು ವಿಚಾರದಲ್ಲಿ . . . ನಮಗಿಂತ ಏನು ನೀವು ಹೆಚ್ಚಾಗಿ ಉಪಯೋಗಿಸುವುದಿಲ್ಲ. ಆದರೆ ಅಕಾಲ ಮೃತ್ಯುವಾದಾಗ ಆ ಕುಟುಂಬದ ಗತಿ ಏನಾಗಬೇಕು? ಆ ಮನುಷ್ಯನಲ್ಲಿ ಏನು talent ಇತ್ತೋ ಎನ್ನುವುದು ಗೊತ್ತಿಲ್ಲ. Very unfortunate. Our sincere condolences to that family.

ಮಾನ್ಯ ಅಧ್ಯಕ್ಷರೆ, ಇಷ್ಟನ್ನು ಹೇಳಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, Justice ಕೃಷ್ಣ ಅಯ್ಯರ್ ಅವರ ನೆನಪಿನಲ್ಲಿ Law University ಯಲ್ಲಿಯಾದರೂ ಮಾಡಿ ಅಥವಾ Nation Law College of Indiaದಲ್ಲಿಯಾದರೂ ಮಾಡಿ, ಎಲ್ಲಾದರೂ ಮಾಡಿ ಅವರ ಹೆಸರಿನಲ್ಲಿ ಒಂದು Chair ಅನ್ನು establish ಮಾಡಿ. ಪ್ರತಿ ವರ್ಷವೂ ಅವರು ಬರೆದಂತಹ ಬರಹಗಳ ಮೇಲೆ, ಅವರು ಹೇಳಿರತಕ್ಕಂತಹ ಮಾತುಗಳು ಕೊನೆಯದಾಗಿ ಅವರು ಹೇಳಿದಂತಹ ಮೂರನೇ ಮಾತನ್ನು ಹೇಳಿ ನಾನು ಕುಳಿತುಕೊಳ್ಳುತ್ತೇನೆ. The cowardice of the honest gives rise to scoundrels. ಪ್ರಾಮಾಣಿಕನ ಅಂಜುಬುರುಕುತನ scoundrels ನ ಉದ್ಭವವಾಗುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾರೆ. ಕೆಲವು ವೇಳೆಯಲ್ಲಿ ನಾವೆಲ್ಲರೂ ಪ್ರಾಮಾಣಿಕರಾಗಿರುತ್ತೇವೆ. ಅಂಜುಬುರುಕುತನ, ನಮಗೆ ಲಾಭ–ನಷ್ಟದ ಲೆಕ್ಕಾಚಾರ, ಏನು ಹೇಳಬಹುದೋ ಅಥವಾ ಏನು ಹೇಳಿದರೆ ಏನಾಗುತ್ತದೋ ಎಂದೆನಿಸುತ್ತದೆ. ನಿರ್ಭಯವಾಗಿ ಹೇಳುವಂತಹ ಮಹಾನ್ ವ್ಯಕ್ತಿಯನ್ನು, ಚೇತನವನ್ನು ನಾವಿಂದು ಕಳೆದುಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಗಮನ ಕೊಡಬೇಕೆಂದು ಹೇಳಿ, ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ವಂದಿಸಿ ಇಂದು ನಾವುಗಳು ಸಂತಾಪ ಸೂಚನೆ ಸಲ್ಲಿಸಿದ ಎಲ್ಲಾ ಕುಟುಂಬಗಳಿಗೆ ಆ ನಷ್ಟವನ್ನು ಭರಿಸುವ ಶಕ್ತಿಯನ್ನು ಪ್ರಕೃತಿ ಕೊಡಲೆಂದು ಹೇಳಿ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

ಅಧ್ಯಕ್ಷರು:– ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

(ಈ ಹಂತದಲ್ಲಿ ಸದನದಲ್ಲಿ ಹಾಜರಿದ್ದ ಎಲ್ಲರೂ ಎದ್ದು ನಿಂತು ಒಂದು ನಿಮಿಷಗಳ ಕಾಲ ಮೌನವನ್ನಾಚರಿಸಿದರು.)

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಬೇಕು.

(ಗೊಂದಲ)

ಅಧ್ಯಕ್ಷರು:– ಸ್ವಲ್ಪ ತಾಳ್ಮೆಯಿಂದಿರಿ, ಈ ಸದನವು ಅಂಗೀಕರಿಸಿದ ಸಂತಾಪ ಸೂಚನೆ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

2. ಪ್ರಕಟಣೆ

ವಿಷಯ: ವಿಧಾನ ಸಭೆಯ ಅಧಿವೇಶನದ ಸಂದರ್ಭದಲ್ಲಿ ವಿಧಾನಸಭೆ ಸಭಾಂಗಣದಲ್ಲಿ ಮೊಬೈಲ್ ನಿಷೇದಿಸಿರುವ ಬಗ್ಗೆ.

ಇನ್ನೊಂದು ವಿಧಾನಸಭೆಯ ಅಧಿವೇಶನದ ಸಂದರ್ಭದಲ್ಲಿ ವಿಧಾನಸಭೆಯ ಸಭಾಂಗಣದೊಳಗೆ ಮೊಬೈಲ್‌ಗಳ ಬಳಕೆಯನ್ನು ನಿಷೇದಿಸಲಾಗಿರುವುದರಿಂದ ಮಾನ್ಯ ಸದಸ್ಯರುಗಳು ತಮ್ಮ ಮೊಬೈಲ್‌ಗಳನ್ನು ವಿಧಾನಸಭೆಯ ಆಡಳಿತ ಪಕ್ಷದ ಮೊಗಸಾಲೆ ಮತ್ತು ವಿಧಾನಸಭೆಯ ವಿರೋಧ ಪಕ್ಷದ ಮೊಗಸಾಲೆಗಳಲ್ಲಿರುವ ಕೊಠಡಿಗಳಲ್ಲಿನ ಮಾರ್ಷಲ್‌ರವರ ಸಿಬ್ಬಂದಿಗಳ ಬಳಿ ನೀಡಿ ಸದಸ್ಯರು ಸದನದೊಳಗೆ ಪ್ರವೇಶಿಸಬೇಕೆಂದು ಎಲ್ಲಾ ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಸಲಾಗಿದೆ.

3. ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಮಾನ್ಯ ಸಹಕಾರ ಹಾಗೂ ಸಕ್ಕರೆ ಸಚಿವರಿಂದ ಸಮರ್ಪಕವಾದ ಉತ್ತರ ಬಾರದಿರುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಮಹದೇವ ಪ್ರಸಾದ್ ರವರು ಹೇಳಿದ ಉತ್ತರ ಸಮಾಧಾನ ತರಲಿಲ್ಲ.

(ಗೊಂದಲ)

ಅಧ್ಯಕ್ಷರು:– ಒಂದು ನಿಮಿಷ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಂಡಿದ್ದೇನೆ. ಇದನ್ನು ಮುಕ್ತಾಯಗೊಳಿಸುವುದಕ್ಕೆ ಈ